ಗಾಳಿಯನ್ನು ಹೊರಸೂಸುವುದರಲ್ಲಿ ಪ್ರಮುಖವಾಗಿದೆ. ಈ ಪ್ರಮುಖ ಉದ್ಯಮಗಳ ವರ್ಗಗಳ ರೀತಿಯ ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ (ಅನುಬಂಧ).

ಆ) ಸರ್ಕಾರವು ಕರ್ನಾಟಕ ರಾಜ್ಯದ ಎಲ್ಲಾ ಭೂ ಪ್ರದೇಶವನ್ನು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ ೧೯೮೧ರ ರೀತ್ಯಾ ''ವಾಯು ಮಾಲಿನ್ಯ ನಿಯಂತ್ರಣಕ್ಕೊಳಪಟ್ಟ ಪ್ರದೇಶವೆಂದು'' ಘೋಷಿಸಲು ಕ್ರಮಕೈಗೊಂಡಿದೆ. ಹಾಗೂ ಇಡೀ ರಾಜ್ಯದಲ್ಲಿ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ ೧೯೮೧ರನ್ವಯ ವಾಯು ಮಾಲಿನ್ಯ ನಿಯಂತ್ರಣ ಕಾರ್ಯವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮುಖಾಂತರ ಜರುಗಿಸುತ್ತಿದೆ.

ಇ) ಹೌದು.

ಅನುಬಂಧ

ವಾಯು ಮಾಲಿನ್ಯಕ್ಕೆ ಕಾರಣವಾದ ಪ್ರಮುಖ ಉದ್ಯಮಗಳ ಪಟ್ಟಿ.

ಕ್ರಮ ಸಂಖ್ಯೆ	ವಾಯು ಮಾಲಿನ್ಯ ಕಾಯಿದೆ ಪ್ರಕಾರ ಉದ್ಯಮಗಳ ವರ್ಗ	ಸಂಖ್ಯೆ
೧)	ಸಿಮೆಂಟ್ ಮತ್ತು ಸಿಮೆಂಟ್ ಉತ್ಪನ್ನಗಳ ಉದ್ಯಮಗಳು	೧೨
೨)	ಪಿಂಗಾಣಿ ಮತ್ತು ಪಿಂಗಾಣಿಗೆ ಸಂಭಂದಪಟ್ಟ ಉದ್ಯಮಗಳು	೬
೩)	ರಾಸಾಯನಿಕ ಮತ್ತು ಸಂಭಂದಪಟ್ಟ ಉದ್ಯಮಗಳು	೧೩
೪)	ಇಂಜಿನಿಯರಿಂಗ್ ಉದ್ಯಮಗಳು	೧೪
೫)	ಕಬ್ಬಿಣ ಸಂಭಂದವಾದ ಲೋಹ ಉದ್ಯಮಗಳು	೨೨
೬)	ರಾಸಾಯನಿಕ ಗೊಬ್ಬರ ಉದ್ಯಮಗಳು	೨
೭)	ಎರಕದ ಉದ್ಯಮಗಳು	೨
೮)	ಆಹಾರ ಮತ್ತು ವ್ಯವಸಾಯ ಉತ್ಪನ್ನಗಳು ಉದ್ಯಮಗಳು	೧೦
೯)	ಕಬ್ಬಿಣ ಸಂಭಂದವಲ್ಲದ ಲೋಹ ಉದ್ಯಮಗಳು	೬
೧೦)	ಖನಿಜಗಳ ಆದಿರನ್ನು ಸಂಸ್ಕರಣ ಮಾಡುವ ಉದ್ಯಮಗಳು	೩
೧೧)	ವಿದ್ಯುತ್ ಉತ್ಪನ್ನ ಘಟಕಗಳು ಮತ್ತು ಬಾಯ್ಲರ್ ಉದ್ಯಮಗಳು	೨
೧೨)	ಕಾಗದ ಮತ್ತು ಮರದ ತಿರುಳನ್ನು ಉತ್ಪಾದಿಸುವ ಉದ್ಯಮಗಳು	೪
೧೩)	ಬಟ್ಟೆ ಸಂಸ್ಕರಣ ಉದ್ಯಮಗಳು	೨
೧೪)	ಪೆಟ್ರೋ ರಾಸಾಯನಿಕ ಉದ್ಯಮಗಳು	೧
	ಒಟ್ಟು	೯೯

ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್ ಕುರಿತಂ

೧೨೯೦(೧೯೯೬) ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ;—

ಅ) ರಾಜ್ಯ ಸ್ವಾಮ್ಯದ ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಒಟ್ಟು ಹೂಡಿರುವ ಬಂಡವಾಳ ಹಾಗೂ ಇದರ ಪಾಲುದಾರ ಸಂಸ್ಥೆಗಳು ಯಾವುವು?

ಆ) ಈವರೆಗೆ ಎಂ. ಪಿ. ಎಂ. ಅನುಭವಿಸುವ ನಷ್ಟದ ಒಟ್ಟು ಮೊತ್ತವೆಷ್ಟು?

ಇ) ೧-೧-೮೭ ರಿಂದ ೩೧-೪-೮೮ರ ವರೆಗೆ ಪೆಂಕೆ ಅನಾಹುತದಿಂದ ನಷ್ಟಕ್ಕೊಳಗಾದ ಕಚ್ಚಾಸಾಮಗ್ರಿಗಳ ಮೌಲ್ಯವೆಷ್ಟು ?

ಈ) ನ್ಯೂಸ್‌ಪ್ರಿಂಟ್ ಹಾಗೂ ಕಾಗದದ ಬೆಲೆ ಏರಿಕೆಯಾದಾಗ್ಯೂ ಎಂ. ಪಿ. ಎಂ. ಏಕೆ ನಷ್ಟ ಅನುಭವಿಸುತ್ತದೆ ?

ಶ್ರೀ ಜೆ. ಹೆಚ್. ಪಟೀಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—

ಅ) ಇಲ್ಲಿಗೆ ಪಾವತಿಯಾಗಿರುವ ಎಂ. ಪಿ. ಎಂ. ನವರ ಬಂಡವಾಳ ರೂ. ೬೩, ೨೮, ೦೧, ೩೦೦ ಗಳು ಮಾತ್ರ ಬಂಡವಾಳದಲ್ಲಿ ಪಾಲುದಾರರಾಗಿರುವ ಸಂಸ್ಥೆಗಳು ಕೆಳಕಂಡಂತೆ ಇವೆ.

ಕರ್ನಾಟಕ ಸರಕಾರ

ಅದರ್ ಗವರ್ನ್‌ಮೆಂಟ್ ಹೋಲ್ಡಿಂಗ್ಸ್ :

ಪ್ರೆಸಿಡೆಂಟ್ ಆಫ್ ಇಂಡಿಯಾ
ಪಂಜಾಬ್ ಸರ್ಕಾರ
ಹರಿಯಾಣ ಸರ್ಕಾರ
ಹಿಮಾಚಲ ಪ್ರದೇಶ ಸರ್ಕಾರ

ಪಬ್ಲಿಕ್ ಫೈನಾನ್ಸಿಯಲ್ ಇನ್ಸ್ಟ್ಟ್ಯೂಷನ್ಸ್ :

ಎಲ್. ಐ. ಸಿ.
ಯು. ಟಿ. ಐ.
ಐ. ಸಿ. ಐ. ಸಿ. ಐ.
ನ್ಯೂ ಇಂಡಿಯಾ ಅಸ್ಯೂರೆನ್ಸ್ ಕಂಪನಿ ಲಿಮಿಟೆಡ್
ಓರಿಯಂಟಲ್ ಫೈರ್ ಅಂಡ್ ಜನರಲ್ ಇನ್‌ಶ್ಯೂರೆನ್ಸ್ ಕಂಪನಿ,
ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂಪನಿ
ಜನರಲ್ ಇನ್‌ಶ್ಯೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
ನ್ಯಾಷನಲ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್
ಐ. ಡಿ. ಬಿ. ಐ.
ಐ. ಎಫ್. ಸಿ. ಐ.
ನ್ಯಾಷನಲೈಸ್ಡ್ ಬ್ಯಾಂಕ್
ಬಾಡೀಸ್ ಕಾರ್ಪೊರೇಟ್
ನಾನ್ ಇನಿಡೆಂಟ್ಸ್
ಅದರ್ಸ

ಆ) ೩೧–೩–೮೭ರ ವರೆಗೆ ಯಾವ ನಷ್ಟವೂ ಆಗಿಲ್ಲ ೧೯೮೭–೮೮ರ ಲೆಕ್ಕಪತ್ರಗಳು ಇನ್ನುವರೆಗೂ ಪೂರ್ಣಗೊಳಿಸಿಲ್ಲ.

ಇ) ೬೫ ಲಕ್ಷ ರೂಗಳು.

ಈ) ಮೇಲೆ 'ಆ' ಕ್ಕೆ ಕೊಟ್ಟಿರುವ ಉತ್ತರಾನುಸಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅರಣ್ಯ ವಿಸ್ತೀರ್ಣದ ಬಗ್ಗೆ

೧೨೯೧ (೧೬೧೫) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶ ಒಟ್ಟು ಜಮೀನಿನ ವಿಸ್ತೀರ್ಣವೆಷ್ಟು ?

ಆ) ಈ ಅರಣ್ಯ ಪ್ರದೇಶಗಳಿರುವ ಸ್ಥಳಗಳಾವುವು ?

ಇ) ಕಳೆದ ೩ ವರ್ಷಗಳಲ್ಲಿ ಬೆಳಸಲಾಗಿರುವ ಅರಣ್ಯದ ವಿಸ್ತೀರ್ಣವೆಷ್ಟು ಹಾಗೂ ಅರಣ್ಯವನ್ನು ಬೆಳೆಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೆ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ೩೮,೬೪೫.೫೬ ಚದರ ಕಿ. ಮೀ.

ಆ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಇರುತ್ತವೆ. ವಿವರಗಳನ್ನು ಲಗತ್ತಿಸಿದೆ.